# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 210 | Pages. 2 | Date: 29-06-2025, SUNDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 210 - ಪುಟಗಳು : 2 - 29 ಜೂನ್ 2025 ಭಾನುವಾರ | Ph: 8762954248 | ದರ : ₹1


## ಹೃದಯಾಘಾತ: ಮುಂದುವರಿದ ಸಾವಿನ ಸರಣಿ

### 39 ದಿನಗಳಲ್ಲಿ 18 ಜನರ ಸಾವು | ಸಾರ್ವಜನಿಕರಲ್ಲಿ ಆತಂಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದ ಸರಣಿ ಮರಣ ಮೃದಂಗ ಮುಂದುವರಿದಿದ್ದು, ಶನಿವಾರ ಇಬ್ಬರು ಅಸುನೀಗಿದ್ದಾರೆ.

ನಗರದ ಸಿದ್ದೇಶ್ವರ ನಗರದ ಆಟೋ ಚಾಲಕ ಗೋವಿಂದ (37) ಹಾಗೂ ಹ್ಯಾರನೆ ಗ್ರಾಮದ ಗಿರೀಶ್ (41) ಮೃತರು. ಆಟೋ ಚಲಾಯಿಸುತ್ತಿದ್ದಾಗ ಗೋವಿಂದ ಅವರಿಗೆ ಎದೆನೋವು ಕಾಣಿಸಿಕೊಂಡಿದ್ದು, ಕೂಡಲೆ ಎಚ್ಚೆತ್ತ ಅವರು ಆಟೋ ಚಲಾಯಿಸಿಕೊಂಡು ಹಿಮ್ಸ್‌ಗೆ ದೌಡಾಯಿಸಿದ್ದರು. ನಂತರ ತನ್ನ ಮಾವನಿಗೆ ಕರೆ ಮಾಡಿ ಕರೆಸಿಕೊಂಡಿದ್ದರು. ರಕ್ತ ಪರೀಕ್ಷೆ ಮಾಡಿಸಿ ವರದಿಗಾಗಿ ಕಾಯುತ್ತಿದ್ದಾಗಲೇ ದಿಢೀರ್ ಹೃದಯಾಘಾತದಿಂದ ಆಸ್ಪತ್ರೆಯಲ್ಲೇ ಮೃತಪಟ್ಟಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಹ್ಯಾರನೆ ಗ್ರಾಮದ ಗಿರೀಶ್ ಅವರು ಆಸ್ಪತ್ರೆಗೆ ಕರೆತರುತ್ತಿದ್ದಾಗ ಮಾರ್ಗಮಧ್ಯೆ ಪ್ರಾಣ ಬಿಟ್ಟಿದ್ದಾರೆ. ಬಿಎಂಟಿಸಿ ಚಾಲಕರಾಗಿದ್ದ ಅವರು ರಜೆ ಹಿನ್ನೆಲೆಯಲ್ಲಿ ಊರಿಗೆ ಬಂದಿದ್ದರು. ಮಧ್ಯಾಹ್ನ ಜೋಳ ಬೆಳೆಗೆ ಗೊಬ್ಬರ ಹಾಕಿ ಮನೆಗೆ ಬಂದು ಕೈಕಾಲು ತೊಳೆಯುತ್ತಿದ್ದಾಗ ಕುಸಿದು ಬಿದ್ದಿದ್ದಾರೆ. ಕುಟುಂಬಸ್ಥರು ಆಸ್ಪತ್ರೆಗೆ ಕರೆ ತರುತ್ತಿದ್ದಾಗ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ.



#### ಹೃದಯಾಘಾತಕ್ಕೆ ಬಲಿಯಾದವರು

ಮೇ 28 : ಸಂಧ್ಯಾ (20) ಹೊಳೆನರಸೀಪುರ
ಮೇ 28 : ಅಭಿಷೇಕ್ (19) ಅರಕಲಗೂಡು
ಮೇ 30 : ಕವನ (20) ಕೆಲವತ್ತಿ (ಹಾಸನ)
ಜೂ.11 : ನಿಶಾಂತ್ (20) ಹೊಳೆನರಸೀಪುರ
ಜೂ.12 : ನಾಗಪ್ಪ (55) ಮಗ್ಗೆ (ಆಲೂರು)
ಜೂ.12 : ನೀಲಕಂಠಪ್ಪ (58) ಹಾಸನ
ಜೂ.13 : ದೇವರಾಜ್ (43) ದುಮ್ಮಗೆರೆ
ಜೂ.13 : ಸತೀಶ್ (57) ಹಾಸನ
ಜೂ.14 : ಕಾಂತರಾಜು (51) ದೊಡ್ಡಪುರ, ಜೂ.18 : ನವೀನ್ ಕುಮಾರ್ (31) ಅರಸೀಕೆರೆ, ಜೂ.19 : ತೀರ್ಥಪ್ಪ (68) ಬೇಲೂರು, ಜೂ.20 : ನಿಶಾದ್ ಅಹ್ಮದ್ (35) ಬೇಲೂರು
ಜೂ.21 : ಚೇತನ್ (38) ಸತ್ಯಮಂಗಲ
ಜೂ.23 : ಯೋಗೇಶ್ ಎಂ.ಕೆ. (32) ಚ.ರಾ.ಪಟ್ಟಣ
ಜೂ.24 : ಸುಪ್ರಿಯಾ (22) ಹೊಳೆನರಸೀಪುರ
ಜೂ.25 : ಮಂಜುನಾಥ್ (51) ಹಾಸನ
ಜೂ.28 : ಗೋವಿಂದ (37) ಹಾಸನ
ಜೂ. 28 : ಗಿರೀಶ್ (41) ಹ್ಯಾರನೆ

#### ಕುಟುಂಬ ಕುಡಿಗಳ ದಾರುಣ ಅಂತ್ಯ

ಜಿಲ್ಲೆಯಲ್ಲಿ ಹೃದಯಾಘಾತ ಪ್ರಕರಣಗಳು ವರದಿಯಾಗುತ್ತಲೇ ಇದ್ದು ಕಳೆದ 39 ದಿನಗಳಲ್ಲಿ 18 ಜನರು ಮೃತಪಟ್ಟಿದ್ದಾರೆ. 19, 20 ವರ್ಷದ ಯುವಕ-ಯುವತಿಯರು ದಾರುಣ ಸಾವಿಗೀಡಾಗುತ್ತಿರುವುದು ಆತಂಕ ಸೃಷ್ಟಿಸಿದೆ. ಬಾಳಿ ಬದುಕಬೇಕಾದವರೇ ಅರ್ಧಕ್ಕೆ ಜೀವನದ ಆಟ ಮುಗಿಸುತ್ತಿದ್ದಾರೆ. ಇವರನ್ನೇ ನಂಬಿಕೊಂಡಿದ್ದ ಕುಟುಂಬ ಈಗ ಅಕ್ಷರಶಃ ಕಂಗಾಲಾಗಿದೆ.

ಅದರಲ್ಲೂ ಜಿಲ್ಲೆಯಲ್ಲಿ ಹೃದಯಾಘಾತ ಬೆಂಬಿಡದ ಭೂತದಂತೆ ಕಾಡುತ್ತಿರುವುದು ಆತಂಕ ಹೆಚ್ಚಿಸಿದೆ.

ಕ್ಷಣದಲ್ಲಿ ಮರಣ: ಇಷ್ಟು ಮಂದಿಯ ಪೈಕಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮೃತಪಟ್ಟಿರುವುದು ಬದುಕು ಇಷ್ಟೊಂದು ಚುಟುಕೇ, ವಯಸ್ಸು ಕಡಿಮೆಯಾಯಿತೇ ಎಂಬ ಆತಂಕ, ಅನುಮಾನ ಮೂಡಿಸಿದೆ. ಎಷ್ಟೋ ಮಂದಿ ಹೆತ್ತವರಿಗೆ ಒಬ್ಬನೇ ಮಗ ಅಥವಾ ಮಗಳು, ಇನ್ನೊಬ್ಬರು ಮನೆಗೆ ಜೀವನಾಧಾರವಾಗಿದ್ದವರನ್ನು ಕಳೆದುಕೊಂಡು ಕಣ್ಣೀಡುತ್ತಿದ್ದಾರೆ. ನಿನ್ನೆ ಜೊತೆಯಿದ್ದವರು ಇಂದು ಇಲ್ಲದೆ ಮೃತರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ.

#### ಜಿಲ್ಲಾದ್ಯಂತ ಜಾಗೃತಿ ಅಭಿಯಾನ

ಯುವ ಜನರಲ್ಲಿ ಹೆಚ್ಚುತ್ತಿರುವ ದುಶ್ಚಟ, ಅಸಮತೋಲನ ಅಹಾರ ಸೇವನೆ ಹಾಗೂ ಜೀವನ ಶೈಲಿಯಲ್ಲಿ ಆಗುತ್ತಿರುವ ಬದಲಾವಣೆಗಳಿಂದಲೇ ಹೃದಯಘಾತ ಸಂಭವಿಸುತ್ತಿವೆ. ಹೃದಯಾಘಾತ ತಡೆ ಸಂಬಂಧ ಸಂಸದರ ನೇತೃತ್ವದಲ್ಲಿ ಎಲ್ಲಾ ಅರೋಗ್ಯ ಅಧಿಕಾರಿಗಳ ಸಭೆ ನಡೆಸಲಾಗಿದೆ.

ಆರೋಗ್ಯ ಇಲಾಖೆಯಿಂದ ಜಾಗೃತಿ ಮೂಡಿಸಲು ಸಿದ್ಧತೆ ನಡೆಸಲಾಗಿದೆ. ಆರೋಗ್ಯ ಕಾರ್ಯಕರ್ತೆಯರ ಮೂಲಕ ಪ್ರಾಥಮಿಕ ಅರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಶಾಲಾ ಕಾಲೇಜುಗಳಲ್ಲಿ ಹೃದಯ ಅರೋಗ್ಯದ ತಪಾಸಣೆ ಬಗ್ಗೆ ಜಾಗೃತಿ ಮೂಡಿಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಡಾ. ಅನಿಲ್ ತಿಳಿಸಿದ್ದಾರೆ.

#### 2 ವರ್ಷದಲ್ಲಿ 190 ಮಂದಿ ಮೃತ

ಕಳೆದೆರಡು ವರ್ಷಗಳ ಅಂಕಿ ಅಂಶ ಗಮನಿಸಿದಾಗ ಮತ್ತೊಂದು ಕರಾಳ ಅಧ್ಯಾಯ ತೆರೆದುಕೊಳ್ಳುತ್ತದೆ. ಕಳೆದೆರಡು ವರ್ಷಗಳಲ್ಲಿ ಬರೋಬ್ಬರಿ 190 ಜನರು ಹೃದಯಾಘಾತಕ್ಕೆ ಬಲಿಯಾಗಿದ್ದಾರೆ. ಇವರಲ್ಲಿ 20 ರಿಂದ 30 ವಯಸ್ಸಿನ 14 ಮಂದಿ, 30 ರಿಂದ 40 ವಯಸ್ಸಿನ 40 ಹಾಗೂ 40 ವರ್ಷ ಮೇಲ್ಪಟ್ಟ 136 ಜನ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿಯಿಂದ ತಿಳಿದುಬಂದಿದೆ.

> ಎದೆ ನೋವು ಕಂಡುಬಂದರೆ ನಿರ್ಲಕ್ಷ್ಯ ಬೇಡ. ತಕ್ಷಣ ವೈದ್ಯರ ಬಳಿ ತೆರಳಿ ಪರೀಕ್ಷಿಸಿಕೊಂಡು ತುರ್ತು ಚಿಕಿತ್ಸೆ ಪಡೆದರೆ ಅಕಾಲಿಕ ಸಾವು ತಡೆಯಬಹುದು ತಡೆಯಬಹುದು. ಈ ಬಗ್ಗೆ ಪ್ರತಿಯೊಬ್ಬರೂ ಗಮನ ಹರಿಸಬೇಕು.
>
> **– ಆಶ್ರಿತ್ ಶ್ರೀಧರ್, ಹೃದ್ರೋಗ ತಜ್ಞ**

## ಪ್ರಧಾನಿ ನರೇಂದ್ರ ಮೋದಿಗೆ ಧರ್ಮ ಚಕ್ರವರ್ತಿ ಬಿರುದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ದೆಹಲಿಯ ವಿಜ್ಞಾನ ಭವನದಲ್ಲಿ ಸಂಸ್ಕೃತಿ ಸಚಿವಾಲಯ ಹಾಗೂ ಭಗವಾನ್ ಮಹಾವೀರ ಅಹಿಂಸಾ ಭಾರತಿ ಟ್ರಸ್ಟ್ ಸಹಯೋಗದೊಂದಿಗೆ ಶನಿವಾರ ಆಯೋಜಿಸಿದ್ದ ಆಚಾರ್ಯ ಶ್ರೀ ವಿದ್ಯಾನಂದ ಮಹಾರಾಜರ ಜನ್ಮ ಶತಮಾನೋತ್ಸವಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

ಆಚಾರ್ಯ ಶ್ರೀ ಪ್ರಜ್ಞಾಸಾಗರ ಮಹಾರಾಜರು ಮತ್ತು ಶ್ರವಣಬೆಳಗೊಳ ದಿಗಂಬರ ಜೈನ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಉಪಸ್ಥಿತರಿದ್ದರು.

ಪ್ರಧಾನಿ ನರೇಂದ್ರ ಮೋದಿ ಮಾತನಾಡಿ, ಜೈನ ನೀತಿ ಶಾಸ್ತ್ರ ಪ್ರಾಕೃತ ಸಾಹಿತ್ಯ ಮತ್ತು ಶಾಸ್ತ್ರೀಯ ಭಾರತೀಯ ಚಿಂತನೆಯ ಕುರಿತು 50ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದ ಆಚಾರ್ಯ ಶ್ರೀ ವಿದ್ಯಾನಂದ ಮಹಾರಾಜರು ಹಲವಾರು ಐತಿಹಾಸಿಕ ಜೈನ ದೇವಾಲಯಗಳ ಪುನರುಜ್ಜೀವನ ಮತ್ತು ಸಾಂಪ್ರದಾಯಿಕ ಶಿಕ್ಷಣದ ಪ್ರಚಾರದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಪ್ರಯತ್ನಗಳು ಜೈನ ಪರಂಪರೆಯ ಸಂರಕ್ಷಣೆ ಮತ್ತು ಪ್ರಾಚೀನ ಭಾರತೀಯ ಭಾಷೆಗಳಲ್ಲಿ ಆಸಕ್ತಿಯ ಪುನರುಜ್ಜೀವನಕ್ಕೆ ಗಮನಾರ್ಹ ಕೊಡುಗೆ ನೀಡಿದೆ ಎಂದರು.



ಅಭಿನವ ಚಾರುಕೀರ್ತಿ ಸ್ವಾಮೀಜಿ ಮಾತನಾಡಿ, ಆಚಾರ್ಯಶ್ರೀ ವಿದ್ಯಾನಂದ ಮಹಾರಾಜರು ದೇಶದಾದ್ಯಂತ ವಿಹಾರ ಮಾಡಿ ಜೈನ ಧರ್ಮವನ್ನು ಪ್ರಚುರಪಡಿಸಿ, ಭಗವಾನ್ ಮಹಾವೀರಸ್ವಾಮಿ ಅವರ ಸಂದೇಶವನ್ನು ವಿಶ್ವಕ್ಕೆ ತಲುಪಿಸಿದ್ದಾರೆ. ಹಲವಾರು ಪ್ರಾಚೀನ ಮಂದಿರ, ಶಾಸ್ತ್ರಗಳ ಸಂರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ತಿಳಿಸಿದರು.

ಭಗವಾನ್ ಮಹಾವೀರರ 2500ನೇ ವರ್ಷದ ನಿರ್ವಾಣ ಮಹೋತ್ಸವವನ್ನು ದೇಶದಾದ್ಯಂತ ಧರ್ಮಚಕ್ರ ಶ್ರೀವಿಹಾರ ಮಾಡುವ ಮೂಲಕ ಧರ್ಮಪ್ರಭಾವನೆ ಮಾಡಿ, ಶ್ರವಣಬೆಳಗೊಳದಲ್ಲಿ ಧರ್ಮಚಕ್ರ ಸ್ಥಾಪಿಸಿ ವಿದ್ಯಾನಂದ ಮಹಾರಾಜರು ಶ್ರವಣಬೆಳಗೊಳದ ಹಿಂದಿನ ಗುರುಗಳಾಗಿದ್ದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರಿಗೆ ಗುರುಗಳು ಮತ್ತು ಮಾರ್ಗದರ್ಶಕರಾಗಿದ್ದರು. 1993ರಲ್ಲಿ ಶ್ರವಣಬೆಳಗೊಳದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ 1000ನೇ ವರ್ಷದ ಸಹಸ್ರಾಬ್ದಿ ಮಹಾಮಸ್ತಕಾಭಿಷೇಕ ಮಹೋತ್ಸವವನ್ನು ಆಯೋಜನೆ ಮಾಡಿ ಇಡೀ ವಿಶ್ವವೇ ಶ್ರವಣಬೆಳಗೊಳದತ್ತ ತಿರುಗಿ ನೋಡುವಂತೆ ಮಾಡಿದಂತಹವರು ವಿದ್ಯಾನಂದ ಮಹಾರಾಜರು ಎಂದು ಹೇಳಿದರು.

ಇದೆ ವೇಳೆ ಆಚಾರ್ಯ ವಿದ್ಯಾನಂದ ಮಹಾರಾಜರ ಭಾವಚಿತ್ರದ ಒಂದು ನೂರು ರೂಪಾಯಿ ಮುಖಬೆಲೆಯ ನಾಣ್ಯ ಹಾಗು ಸ್ಟ್ಯಾಂಪ್ ಅನ್ನು ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಿದರು. ನರೇಂದ್ರ ಮೋದಿ ಅವರಿಗೆ ಧರ್ಮ ಚಕ್ರವರ್ತಿ ಬಿರುದು ನೀಡಿ ಗೌರವಿಸಲಾಯಿತು.

## ಕಾವೇರಿ ಆರತಿ: ನ್ಯಾಯಾಲಯ ಆದೇಶ ಪಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕಾವೇರಿ ಆರತಿ ಸಮಾರಂಭದ ಹಿಂದೆ ಪ್ರವಾಸೋದ್ಯಮ ಅಭಿವೃದ್ಧಿ ಉದ್ದೇಶವಿದೆ. ಮೈಸೂರು ಮಹಾರಾಜರು ನಿರ್ಮಿಸಿರುವ ಕೆಆರ್ ಎಸ್ ಬಳಿ ಕಾವೇರಿ ಆರತಿ ಮಾಡುವುದು ಭಾವನಾತ್ಮಕವಾಗಿ, ಧಾರ್ಮಿಕವಾಗಿ ಒಳ್ಳೆಯದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ತಾಲ್ಲೂಕಿನ ಹಾರನಹಳ್ಳಿ ಕೋಡಿಮಠಕ್ಕೆ ಶನಿವಾರ ಭೇಟಿ ನೀಡಿದ್ದ ಅವರು ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಮಹತಾಯಿ ಪೂಜೆ ಮಾಡಿದರೆ ಒಳಿತಾಗಲಿದೆ ಎಂಬ ನಂಬಿಕೆ ನಮ್ಮದು. ಯಾವ ಕಾರಣಕ್ಕೆ ವಿರೋಧ ಮಾಡುತ್ತಿದ್ದಾರೋ ಗೊತ್ತಿಲ್ಲ. ಹೈಕೋರ್ಟ್ ಸಮಯ ಕೊಟ್ಟು, ಸ್ಪಷ್ಟನೆ ಕೇಳಿದ್ದು ಇಲಾಖೆ ಅದನ್ನು ನೀಡಲಿದೆ. ನ್ಯಾಯಾಲಯ ಆದೇಶದಂತೆ ಸರ್ಕಾರ



ಮುಂದಿನ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು.

ಹವಾಮಾನ ವೈಪರೀತ್ಯ ಕಾರಣ: ಹವಾಮಾನ ವೈಪರೀತ್ಯದಿಂದ ಮೆಕ್ಕೆ ಜೋಳ ಬೆಳೆಗೆ ಬಿಳಿ ಸುಳಿ ರೋಗ ಕಾಣಿಸಿಕೊಂಡಿದ್ದು ಈಗಾಗಲೇ ಔಷಧ ವಿತರಣೆ ಮಾಡಲಾಗಿದೆ. ಕೃಷಿ ಇಲಾಖೆಯಿಂದ ವಿತರಣೆ ಮಾಡಿದ್ದ ಬಿತ್ತನೆ ಬೀಜಕ್ಕಿಂತ ಖಾಸಗಿ ಅಂಗಡಿಗಳ ಬಿತ್ತನೆ ಬೀಜವನ್ನೇ ಹೆಚ್ಚಿನ ರೈತರು ಬಿತ್ತನೆ ಮಾಡಿದ್ದಾರೆ. ಬಿಳಿ ಸುಳಿ ರೋಗ ಉದ್ಭವಕ್ಕೆ ಅದು ಸಹ ಕಾರಣವಾಗಿದೆ. ಹವಾಮಾನ ವೈಪರೀತ್ಯದಿಂದ ರೋಗ ಬಂದಿದೆ ಎಂದು ವಿಜ್ಞಾನಿಗಳು ವರದಿ ಕೊಟ್ಟಿದ್ದಾರೆ. ರೋಗ ನಿವಾರಣೆಗೆ ಬೇಕಾದ ಔಷಧಿ ಕೊಟ್ಟಿದ್ದೇವೆ. ಇನ್ನೂ ಹೆಚ್ಚಿನ ಮಾಹಿತಿ ಇದ್ದರೆ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ ಎಂದರು.

ಎರಡು ವರ್ಷ ಪೂರೈಸಿರುವ ರಾಜ್ಯ ಸರ್ಕಾರ ಸುಗಮವಾಗಿ ನಡೆಯುತ್ತಿದೆ. ರಾಜ್ಯಕ್ಕೆ ನೀಡಬೇಕಿದ್ದ ಅನುದಾನ ಕೊಡುವಲ್ಲಿ ಕೇಂದ್ರ ಮೊಂಡಾಟ ಪ್ರದರ್ಶಿಸಿದ್ದರಿಂದ ಸುಪ್ರೀಂ ಕೋರ್ಟ್ ಮೊರೆ ಹೋಗಿ ಪರಿಹಾರ ಪಡೆಯಬೇಕಾಯಿತು. ಉತ್ತಮ ಮಳೆ ಬೆಳೆಯಾಗಿ 1.48 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆಯಾಗಿದೆ. ಈ ವರ್ಷ 82 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದ್ದು, ಜುಲೈವರೆಗೆ ಮುಂದುವರಿಯಲಿದೆ ಎಂದರು.

ರಾಜ್ಯದಲ್ಲಿ ಒಳ್ಳೆಯ ಮಳೆ ಆಗುತ್ತಿದೆ. ರೈತರಿಗೆ ಅಗತ್ಯವಿರುವ ಗೊಬ್ಬರ, ಬಿತ್ತನೆ ಬೀಜ ಒದಗಿಸುವುದರತ್ತ ನಾನು ಗಮನ ಹರಿಸಿದ್ದೇನೆ. ರಾಜಕಾರಣವನ್ನು ಅವರಿಗೇ ಬಿಟ್ಟಿದ್ದೇನೆಂದು ಸಚಿವ ಕೆ.ಎನ್. ರಾಜಣ್ಣ ಅವರ ಸೆಪ್ಟೆಂಬರ್ ಕ್ರಾಂತಿ ವಿಚಾರಕ್ಕೆ ಪ್ರತಿಕ್ರಿಯಿಸಿದರು.

ಕಾಂಗ್ರೆಸ್ ಮುಖಂಡರಾದ ಜಾವಗಲ್ ಮಂಜುನಾಥ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹಾರನಹಳ್ಳಿ ಶಿವಮೂರ್ತಿ ಇತರರಿದ್ದರು.

## ಸ್ಕೌಟ್ಸ್-ಗೈಡ್ಸ್ ಶಿಕ್ಷಕರು ಜವಾಬ್ದಾರಿ ಅರಿಯಿರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೆಲಸದೊತ್ತಡ ಕಾರಣದಿಂದ ಸ್ಕೌಟ್ಸ್ ಅಂಡ್ ಗೈಡ್ಸ್ ಜವಾಬ್ದಾರಿ ಹೊಂದಿರುವ ಶಿಕ್ಷಕರು ಚಟುವಟಿಕೆಯಿಂದ ದೂರವಾಗುತ್ತಿದ್ದು, ಹಾಗೆ ಮಾಡದೆ ಸಕ್ರಿಯರಾಗಬೇಕು ಎಂದು ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತ ಡಾ. ವೈ.ಎಸ್. ವೀರಭದ್ರಪ್ಪ ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ, ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಶನಿವಾರ ಸ್ಕೌಟ್ಸ್ ಅಂಡ್ ಗೈಡ್ಸ್ ಶಿಕ್ಷಕರಿಗಾಗಿ ಆಯೋಜಿಸಿದ್ದ ಸ್ಕೌಟರ್ ಗೈಡರ್ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಾಡುವ ಕಾಯಕದಲ್ಲಿ ನಿಷ್ಠೆ, ಕಾರ್ಯಕ್ಷಮತೆ ಅಳವಡಿಸಿಕೊಂಡರೆ ಶೀಘ್ರ ಮತ್ತು ನಿಖರ ಗುರಿ ತಲುಪಲು ಸಾಧ್ಯವಾಗುತ್ತದೆ. ಶಾಲೆಯಲ್ಲಿ ವಾರ್ಷಿಕ ಪಾಠ ಹಂಚಿಕೆ ಮಾಡಿಕೊಳ್ಳುವಂತೆ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಚಟುವಟಿಕೆಗಳನ್ನು ಹಂಚಿಕೊಂಡು ಪೂರ್ವ ಯೋಜಿತವಾಗಿ ಬೋಧನೆಗೆ




ತೊಡಗಿದರೆ ನಿಖರ ಫಲಿತಾಂಶ ಪಡೆಯಬಹುದು. ಇಂತಹ ಸಮಾವೇಶಗಳು ಈ ನಿಟ್ಟಿನಲ್ಲಿ ನೆರವಾಗುತ್ತವೆಂದರು. ಸ್ಕೌಟ್ಸ್ ಅಂಡ್ ಗೈಡ್ಸ್ ಮಕ್ಕಳಿಗೆ ನ್ಯಾಷನಲ್ ಸ್ಕೌಟ್ ಸಂಸ್ಥೆ ಜಾರಿ ಮಾಡಿರುವ ಅಂದರೆ ಆನ್ ಲೈನ್‌ಯೂತ್ ಸದಸ್ಯತ್ವ ಕಡ್ಡಾಯವಾಗಿ ಮಾಡಿಸಬೇಕು ಎಂದರು.

ಹಾಸನ ತಾಲ್ಲೂಕಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಪಡೆದ ಬಹಳಷ್ಟು ಶಿಕ್ಷಕರಿದ್ದಾರೆ. ಕಾರ್ಯ ಒತ್ತಡದ ನಡುವೆ ಸ್ಕೌಟ್ಸ್ ಕೆಲಸವನ್ನು ನಿಭಾಯಿಸಬೇಕಾದ ಅನಿವಾರ್ಯತೆ ಇದೆ. ಸ್ಕೌಟ್ಸ್ ಚಟುವಟಿಕೆಗಳಿಂದ ಹಿಂದೆ ಸರಿದವರು ಸಂಸ್ಥೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

2024-25ನೇ ಸಾಲಿನಲ್ಲಿ ರಾಜ್ಯ ಪುರಸ್ಕಾರ, ರಾಷ್ಟ್ರಪತಿ ಪುರಸ್ಕಾರದವರೆಗಿನ ಪರೀಕ್ಷೆಗಳಿಗೆ ಮಕ್ಕಳನ್ನು ತಯಾರು ಮಾಡಿ ತಮ್ಮ ಶಾಲೆಗಳಲ್ಲಿ ಅತ್ಯುತ್ತಮ ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳನ್ನು ವರ್ಷವಿಡೀ ನಡೆಸಿದ ಸಂತ ಫಿಲೋಮಿನಾ ಪ್ರೌಢ ಮತ್ತು ಪ್ರಾಥಮಿಕ ಶಾಲೆ, ಗ್ಯಾರೆಳ್ಳಿ ವರ್ಲ್ಡ್ ಅಕಾಡೆಮಿ, ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಶಾಲೆ, ಹೋಲಿ ಕ್ರಾಸ್ ಸಿಸ್ಟರ್ಸ್ ಶಾಲೆಗೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಬಿ.ಎಸ್. ವನಜಾಕ್ಷಿ ಗೌರವ ಫಲಕ ನೀಡಿ ಸನ್ಮಾನಿಸಿದರು.

ಸುರೇಶ್ ಗುರೂಜಿ ಅವರು, ಘಟಕಗಳ ಮುನ್ನಡೆಸುವಿಕೆಗೆ ಇರುವ ತೊಡಕುಗಳೇನು ಎಂಬುದನ್ನು ಶಿಕ್ಷಕರೊಂದಿಗೆ ಸಮಾಲೋಚಿಸಿದರು. ವಾರ್ಷಿಕ ಕ್ರಿಯಾ ಯೋಜನೆ, ಹಿಂದಿನ ವಾರ್ಷಿಕ ಚಟುವಟಿಕೆಗಳ ವರದಿ ಮಂಡನೆ, ಲೆಕ್ಕಪತ್ರ ಮಂಡನೆ ಮಾಡಲಾಯಿತು.

ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಖಜಾಂಚಿ ರಮೇಶ್, ಸ್ಥಳೀಯ ಸಂಸ್ಥೆಯ ಖಜಾಂಚಿ ಮಹಾಲಿಂಗೇಗೌಡ, ಹಿರಿಯ ಗೈಡರ್ ಕಾಂಚನಮಾಲ, ಸೋಫಿಯಾ ಫರ್ನಾಂಡಿಸ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಹೆಚ್.ಎಂ. ಪ್ರಿಯಾಂಕ, ಶುಭ ಮಂಗಳ, ದೇವರಾಜು ಮತ್ತಿತರರಿದ್ದರು.

## ಸರ್ಕಾರಿ ನೌಕರರ ಹಿತ ಕಾಯಲು ಬದ್ಧ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಳೆದ ಎಂಟು ವರ್ಷಗಳಲ್ಲಿ 5 ಸಾವಿರ ಸರ್ಕಾರಿ ನೌಕರರಿಗೆ ನಿವೇಶನ ಹಂಚಲಾಗಿದೆ. ನೌಕರರ ಹಿತ ಕಾಯಲು ಬದ್ಧನಾಗಿದ್ದೇನೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶನಿವಾರ ಜಿಲ್ಲಾ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಿಂದ ಏರ್ಪಡಿಸಿದ್ದ ನೌಕರರ ಸಂಘದ ಸದಸ್ಯರ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿ, ನೌಕರರ ಕ್ಷೇಮಾಭಿವೃದ್ಧಿಗಾಗಿ ಗೃಹ ನಿರ್ಮಾಣ ಸಂಘದ ಅವಶ್ಯಕತೆಯಿದೆ. ನೌಕರರು ಅನೇಕ ಸಮಸ್ಯೆಗಳಿಂದ ಬಳಲುತ್ತಾರೆ. ಹಾಗಾಗಿ ಗೃಹ ನಿರ್ಮಾಣ ಸಂಘ ಸ್ಥಾಪನೆಯ ಅವಶ್ಯಕತೆ ಹೆಚ್ಚಿದೆ ಎಂದರು.

ಸರ್ಕಾರಿ ನೌಕರರಿಗೆ ಗರಿಷ್ಠ 10 ಲಕ್ಷ ರೂ. ವರೆಗೆ ಸಾಲ ನೀಡುವ ಉದ್ದೇಶದಿಂದ ಗೃಹ ನಿರ್ಮಾಣ ಸಂಘವನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲಾಗುವುದು. ಸಾಲಸೌಲಭ್ಯಕ್ಕಾಗಿ ಬ್ಯಾಂಕ್‌ಗೆ ತೆರಳಿದರೆ ಅನೇಕ ದಾಖಲೆ ಹಾಗು ಸೇವಾ ಶುಲ್ಕ, ಮುಂಗಡ ಇತ್ಯಾದಿ ನಿಯಮ ಮುಂದಿಡುತ್ತಾರೆ. ಪಡೆದ ಸಾಲಕ್ಕೆ ಹೆಚ್ಚಿನ ಬಡ್ಡಿ ವಿಧಿಸುತ್ತಾರೆ. ಆದ್ದರಿಂದ ನೌಕರರು ಸಂಘಕ್ಕೆ ಉತ್ತೇಜನ ನೀಡುವುದರಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ಅನುಕೂಲವಾಗುತ್ತದೆಂದರು.

ಹೆಚ್ಚು ಅಂಕ ಪಡೆದ ಸರ್ಕಾರಿ ನೌಕರರ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರಶಸ್ತಿ ನೀಡುವುದು ಸಂತೋಷದ ವಿಚಾರ. 2019 ರಿಂದ ಇಲ್ಲಿವರೆಗೆ 50 ಸಾವಿರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರನೀಡಲಾಗಿದೆ. ಈ ವರ್ಷ ಹೆಚ್ಚು 8 ಸಾವಿರ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ ಎಂದು ಹೇಳಿದರು. ಹಿಮ್ಸ್ ಪ್ರಾಂಶುಪಾಲ ಡಾ. ಬಿ.ಸಿ. ರವಿಕುಮಾರ್ ಮಾತನಾಡಿ, ಸಾಮಾನ್ಯ ಬಡ ಕುಟುಂಬದಿಂದ ಬಂದ ಉನ್ನತ ಹಂತ ತಲುಪಿ ಪ್ರಾಮಾಣಿಕ ಕೆಲಸ ಮಾಡಿದ್ದೇನೆಂಬ ತೃಪ್ತಿ ಇದೆ. ಮೂರನೇ ತರಗತಿಯಲ್ಲಿದ್ದಾಗ ತಂದೆ-ತಾಯಿ ತೀರಿಕೊಂಡರು. ಹಾಸನ ಮೆಡಿಕಲ್ ಕಾಲೇಜಿನ ಮುಖ್ಯಸ್ಥನಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ಸಾಮಾನ್ಯ ಸಂಗತಿಯಲ್ಲ. ಎರಡು ಬಾರಿ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ ಎಂದರು.

## ಅಧಿಕಾರಕ್ಕಾಗಿ ದೇಶಾದ್ಯಂತ ತುರ್ತು ಪರಿಸ್ಥಿತಿ: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ನ್ಯಾಯಾಂಗಕ್ಕೂ ಬೆಲೆ ನೀಡದ ರಾಜಕಾರಣಿಗಳು ಅಧಿಕಾರಕ್ಕಾಗಿ ತುರ್ತು ಪರಿಸ್ಥಿತಿ ಘೋಷಿಸಿ ದೇಶದ ಜನರನ್ನು ಸಂಕಷ್ಟಕ್ಕೆ ದೂಡಿದರು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಸಿಟಿಜನ್ ಫಾರ್ ಸೋಷಿಯಲ್ ಜಸ್ಟಿಸ್ ಸಂಸ್ಥೆಯಿಂದ ಶನಿವಾರ ಆಯೋಜಿಸಿದ್ದ ತುರ್ತು ಪರಿಸ್ಥಿತಿ ಕರಾಳ ದಿನಗಳ 50 ವರ್ಷ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತುರ್ತು ಪರಿಸ್ಥಿತಿಯಂತಹ ಕರಾಳ ದಿನಗಳು ಮರುಕಳಿಸಬಾರದೆಂದರೆ ಜನರು ಜಾಗರೂಕರಾಗಿರಬೇಕು. ಯಾವ ಸರ್ಕಾರ ಆಯ್ಕೆ ಮಾಡಬೇಕೆಂಬ ಅರಿವು ಇರಬೇಕು.

ತುರ್ತು ಪರಿಸ್ಥಿತಿ ಕೊನೆಗೊಳ್ಳುವ ಮೂಲಕ 1977ರಲ್ಲಿ ದೇಶಕ್ಕೆ ಎರಡನೇ




ಬಾರಿ ಸ್ವತಂತ್ರ ಲಭಿಸಿದೆ. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಿಗೆ ಚಿತ್ರಹಿಂಸೆ ನೀಡಿದ್ದರೆ ವೈಯಕ್ತಿಕ ಸ್ವಾತಂತ್ರ್ಯ ಹರಣ ಮಾಡಲಾಯಿತು. ಅಂತಹ ಕೆಟ್ಟ ದಿನಗಳು ಭವಿಷ್ಯದಲ್ಲಿ ಯಾವತ್ತೂ ಬಾರದಿರಲಿ ಎಂದರು.

ಆಡಳಿತಗಾರರು ಸರ್ವಾಧಿಕಾರಿಗಳಾದಾಗ ತುರ್ತು ಪರಿಸ್ಥಿತಿಯಂತಹ ಕೆಟ್ಟ ಅನುಭವವನ್ನು ದೇಶ ಅನುಭವಿಸಬೇಕಾಗುತ್ತದೆ. ಗಟ್ಟಿ ಸಂವಿಧಾನ ಹೊಂದಿರುವ ದೇಶವನ್ನೇ ತುರ್ತು ಪರಿಸ್ಥಿತಿಯೆಡೆಗೆ ಕೊಂಡೊಯ್ಯಲು ಮುಖ್ಯ ಕಾರಣ ಅಧಿಕಾರದ ಹಪಾಹಪಿ. ನ್ಯಾಯಾಂಗಕ್ಕೂ ಬೆಲೆ ನೀಡದ ಅಂದಿನ ಆಡಳಿತಗಾರರು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಸಾಮಾನ್ಯ ಜನರನ್ನು ಸಂಕಷ್ಟಕ್ಕೆ ಸಿಲುಕಿದರು. ಅಂದು ತರ್ತು ಪರಿಸ್ಥಿತಿ ವಿರೋಧಿಸುತ್ತಿದ್ದ ನಾಯಕರೆಲ್ಲ ಜೈಲಿನಲ್ಲಿದ್ದರೆ ಸಾಮಾನ್ಯ ಜನರೇ ಹೋರಾಟ ಕೈಗೆತ್ತಿಕೊಂಡ ಪರಿಣಾಮ ಎರಡು ವರ್ಷಕ್ಕೆ ತುರ್ತು ಪರಿಸ್ಥಿತಿ ಅಂತ್ಯಗೊಂಡಿತ್ತು. ಆದ್ದರಿಂದ ದೇಶದ ವ್ಯವಸ್ಥೆ ತಿದ್ದಲು ನಾಯಕರೇ ಆಗಬೇಕಿಲ್ಲ. ಸಾಮಾನ್ಯ ಜನರು ಮನಸ್ಸು ಮಾಡಿದರ ಬದಲಾವಣೆ ಮಾಡಬಹುದು. ಅಧಿಕಾರದಲ್ಲೇ ಮುಂದುವರೆಯುವ ಉದ್ದೇಶದಿಂದ ಸಂವಿಧಾನವನ್ನು ಹಲವು ಬಾರಿ ಬದಲಾವಣೆ ಮಾಡಿದ ಕೀರ್ತಿ ಅಂದಿನ ಕಾಂಗ್ರೆಸ್ ನಾಯಕರಿಗೆ ಸಲ್ಲುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್ ಮಾತನಾಡಿ, ದೇಶದ ಪ್ರಜಾಪ್ರಭುತ್ವ ಉಳಿವಿಗಾಗಿ ದೇಶಾದ್ಯಂತ ಅನೇಕ ಹೋರಾಟ ನಡೆದಿದೆ. ಇತಿಹಾಸದಿಂದ ಪಾಠ ಕಲಿತು ವರ್ತಮಾನದಲ್ಲಿ ಬದುಕು ರೂಪಿಸಿಕೊಳ್ಳಬೇಕು. ಆದ್ದರಿಂದ ಮುಂದೆ ತುರ್ತು ಪರಿಸ್ಥಿತಿಯಂತಹ ಕೆಟ್ಟ ಪರಿಸ್ಥಿತಿ ಮತ್ತೊಮ್ಮೆ ದೇಶಕ್ಕೆ ಬಾರದಿರಲೆಂದು ಇಂತಹ ಘಟನೆಯನ್ನು ನೆನೆಯಬೇಕಿದೆ. ಸಂವಿಧಾನವನ್ನು ನಾವು ದೇಶದ ಆತ್ಮ ಎಂದು ಕರೆಯುತ್ತೇವೆ. ಇಂತಹ ಸಂವಿಧಾನವನ್ನು ಇಂದಿರಾ ಗಾಂಧಿ ಕೊಲೆ ಮಾಡಿದ್ದರು. ಸಂವಿಧಾನ ರಚನೆಯ ವೇಳೆ ದೇಶದ ಭವಿಷ್ಯ ಹೇಗಿರಬೇಕೆಂದು ದೀರ್ಘಕಾಲ ಚರ್ಚೆ ನಡೆಸಿ ರೂಪಿಸಿರುವಂತ ಸಂವಿಧಾನ ಭಾರತದ್ದು.

ಸಂವಿಧಾನ ಎಷ್ಟೇ ಉತ್ತಮವಾಗಿದ್ದರು ಆಳುವವರ ಮೇಲೆ ಅದರ ಆಶಯ ನಿಂತಿರುತ್ತದೆ. ವೈಯಕ್ತಿಕ ಹಿತಕ್ಕೆ ಬಳಸಿಕೊಂಡರೆ ಸಂವಿಧಾನ ಹಾಳಾಗಲಿದೆ ಎಂದರು.

ಅಧಿಕಾರ ಎಂಬುದು ಅಹಂ ಆಗಿ ಬದಲಾದಾಗ ತುರ್ತು ಪರಿಸ್ಥಿತಿಯಂತಹ ಸಂದರ್ಭಗಳು ಬರುತ್ತವೆ. ಲೆಕ್ಕಕ್ಕಿಂತ ಹೆಚ್ಚಿನ ಅಧಿಕಾರ ನೀಡಿದಾಗ ಆಳುವವರು ಸರ್ವಾಧಿಕಾರಿಗಳಾಗಲಿದ್ದಾರೆ. ದೇಶವನ್ನೇ ಜೈಲಾಗಿಸಿದ ಮಾಧ್ಯಮಗಳ ವಿರುದ್ಧ ದಿಗ್ಬಂಧನ ವಿಧಿಸಿದ ತುರ್ತು ಪರಿಸ್ಥಿತಿಯಂತಹ ಕರಾಳ ದಿನಗಳು ಮತ್ತೆ ಬಾರದಿರಲು ಜನರು ಜಾಗೃತರಾಗಿರಬೇಕೆಂದರು.

ತುರ್ತು ಪರಿಸ್ಥಿತಿಯಲ್ಲಿ ಜೈಲುವಾಸ ಅನುಭವಿಸಿದ ಜಿಲ್ಲೆಯ ಹಲವರನ್ನು ಸನ್ಮಾನಿಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮತ್ತಿತರರಿದ್ದರು.

# ಕಳಪೆ ಬಿತ್ತನೆ ಬೀಜ ಮಾರಾಟ: ರೈತ ಸಂಘ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರಕಲಗೂಡು: ಕಳಪೆ ಬಿತ್ತನೆ ಬೀಜ ವಿತರಿಸಿದ ಪರಿಣಾಮ ಬೆಳೆಗಳೆಲ್ಲ ನೆಲಕಚ್ಚಿದ್ದು ಬೀಜ ಮಾರಾಟ ಕಂಪನಿಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಶುಕ್ರವಾರ ಪಟ್ಟಣದಲ್ಲಿ ರೈತ ಸಂಘದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು

ಪಟ್ಟಣದ ಪ್ರವಾಸಿ ಮಂದಿರದಿಂದ ರೋಗ ಪೀಡಿತ ಮೆಕ್ಕಜೋಳ, ತಂಬಾಕು ಪೈರುಗಳನ್ನು ಕೈಯಲ್ಲಿ ಹಿಡಿದು ಎತ್ತಿನಗಾಡಿ ಮೂಲಕ ಮೆರವಣಿಗೆ ಆರಂಭಿಸಿದ ರೈತರು,ಅನಕೃ ವೃತ್ತದಲ್ಲಿ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಕಾರ್ಯಾಧ್ಯಕ್ಷ ಹೊನ್ನವಳ್ಳಿ ಭುವನೇಶ್ ಮಾತನಾಡಿ, ತಾಲ್ಲೂಕಿನ ಬಹುತೇಕ ಖಾಸಗಿ ಅಂಗಡಿಗಳಲ್ಲಿ ಮಾರಾಟ ಮಾಡಿರುವ ಬಿತ್ತನೆ ಬೀಜ, ಕೀಟನಾಶಕ ಹಾಗೂ ರಸಗೊಬ್ಬರ ಕಳಪೆಯಾಗಿದೆ. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ಮಳೆಯಿಂದ ಶೀತಾಂಶ ಹೆಚ್ಚಿ ಕೆಲವು ಕಡೆ ಬಿತ್ತನೆ ಹಂತದಲ್ಲಿಯೇ ಬೆಳೆ ಹಾಳಾಗಲು ಕಾರಣವಾಗಿದೆ ಎಂಬ ಹಾರಿಕೆ ಉತ್ತರ ಕೊಡುತ್ತಾರೆ. ಅಲ್ಲದೆ ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಿ ಎಂದು ಹೇಳಲಾಗುತ್ತಿದೆ. ಬೆಳೆ ಪರಿಹಾರವನ್ನು ವಿಮಾ ಕಂಪನಿಗಳು ಕೊಡಬೇಕೆ ವಿನಃ ಬಿತ್ತನೆ ಬೀಜ, ಕೀಟನಾಶಕ ಮತ್ತು ಗೊಬ್ಬರ ಮಾರಾಟ ಮಾಡುವ ಕಂಪನಿಗಳಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಬಾರಿ ಪೂರ್ವ ಮುಂಗಾರು ಮತ್ತು ಮುಂಗಾರು ಮಳೆಯ ಅಬ್ಬರ ಜೋರಾಗಿದೆ. ಜಿಲ್ಲಾದ್ಯಂತ ರೈತರು ಬಿತ್ತನೆ ಮಾಡಿರುವ ಮುಸುಕಿನ ಜೋಳ ರೋಗಭಾದೆಗೆ ತುತ್ತಾಗಿ ರೈತರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದು ಕಳಪೆ ಬಿತ್ತನೆ ಬೀಜದಿಂದಲೇ ನಷ್ಟವಾಗಿದೆ ಎಂದರು.

ಮುಂಗಾರು ಆರಂಭಕ್ಕೆ ಮುನ್ನ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ರೈತರ ಸಭೆ ನಡೆಸಿ ಕಳಪೆ ಬಿತ್ತನೆ ಬೀಜ, ಕೀಟನಾಶಕ ಹಾಗೂ ರಸಗೊಬ್ಬರ ಮಾರಾಟ ಕುರಿತು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಆದರೆ ಇಂದಿನ ಬೆಳೆ ಹಾನಿ ಕುರಿತು ಯಾವ ಕ್ರಮ ಕೈಗೊಂಡಿಲ್ಲ. ರೈತರಿಗೆ ಸೂಕ್ತ ಸಲಹೆ ನೀಡದ ಕಾರಣ ಕಳಪೆ ಬಿತ್ತನೆ ಬೀಜ ಬಿತ್ತನೆ ನಡೆಸಿ ನಷ್ಟಕ್ಕೆ ಒಳಗಾಗುವಂತಾಗಿದೆ. ತಾಲ್ಲೂಕಿನಲ್ಲಿ ತಂಬಾಕು ಬಿತ್ತನೆ ವೇಳೆ ಅತಿವೃಷ್ಟಿಯಿಂದ ನಾಟಿ ಮಾಡಿದ್ದ ತಂಬಾಕು ಸಸಿಗಳು ಕೊಳೆತಿವೆ. ಅದಕ್ಕೆ ಐಟಿಸಿ ಕಂಪನಿ ನೀಡಿರುವ ಕಳಪೆ ಬೀಜಗಳು ಕಾರಣವಾಗಿದೆ.

ಈಗಾಗಲೇ ಬೆಳೆ ಕಳೆದುಕೊಂಡಿರುವ ರೈತರಿಗೆ ಸೂಕ್ತ ಪರಿಹಾರ ದೊರಕಿಸಬೇಕು ಹಾಗೂ ಕಳಪೆ ಮಾರಾಟ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರೈತರ ಸಮಸ್ಯೆಗೆ ಪರಿಹಾರ ಕಲ್ಪಿಸದಿದ್ದರೆ ಜುಲೈ 7ರಂದು ಹಾಸನದ ಜಂಟಿ ಕೃಷಿ ನಿರ್ದೇಶಕರ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನಾ ಸ್ಥಳಕ್ಕೆ ಉಪ ಕೃಷಿ ನಿರ್ದೇಶಕಿ ಕೋಕಿಲಾ ಆಗಮಿಸಿ ರೈತರ ಮನವಿ ಆಲಿಸಿದರು. ತಾಲ್ಲೂಕಿನಲ್ಲಿ ಇದುವರೆಗೂ ಶೇ. 163ರಷ್ಟು ಅಧಿಕ ಮಳೆ ಬಿದ್ದಿದೆ. 17ಸಾವಿರ ಹೆಕ್ಟೇರ್‌ನಲ್ಲಿ ಮುಸುಕಿನ ಜೋಳ ಬಿತ್ತನೆಯಾಗಿದೆ. ಈ ಬೆಳೆಯಲ್ಲಿ ರೋಗ ಕಾಣಿಸಿಕೊಳ್ಳಲು ಶಿಲೀಂದ್ರ ಕಾರಣವಾಗಿದೆ. ಈಗಾಗಲೇ ವಿಜ್ಞಾನಿಗಳು, ಕೃಷಿ ಅಧಿಕಾರಿಗಳು ಭೇಟಿ ನೀಡಿ ರೋಗ ನಿಯಂತ್ರಣಕ್ಕೆ ಸಲಹೆ ನೀಡುತ್ತಿದ್ದಾರೆ. ಕಳಪೆ ಬಿತ್ತನೆ ಬೀಜದಿಂದ ಬೆಳೆ ಹಾನಿಯಾಗಿದ್ದರೇ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ಕವಿತಾ ಇದ್ದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಹೊಂಬೇಗೌಡ, ಮುಖಂಡರಾದ ಜಗದೀಶ್, ಪುಟ್ಟರಾಜು, ರಾಜೇಗೌಡ, ರಮೇಶ್, ದುಬಾಸಿಗೌಡ, ಯೋಗಣ್ಣ, ಗುಂಡಣ್ಣ, ಮೋಹನ್, ರಾಜಣ್ಣ ಭಾಗವಹಿಸಿದ್ದರು.

## ಎರಡನೇ ವರ್ಷದ ಕೆಸರು ಗದ್ದೆ ಕ್ರೀಡಾಕೂಟ



ಆಲೂರು : ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಸನ ಆಲೂರು ತಾಲ್ಲೂಕು ಪತ್ರಕರ್ತರ ಸಂಘದ ಸಹಯೋಗದಲ್ಲಿ ಎರಡನೇ ವರ್ಷದ ಕೆಸರು ಗದ್ದೆ ಕ್ರೀಡಾಕೂಟ ಬೈರಾಪುರದ ಬ್ಯಾಡರಹಳ್ಳಿ ಗ್ರಾಮದಲ್ಲಿ ನಡೆಯಿತು

ಕಾರ್ಯಕ್ರಮದ ಉದ್ಘಾಟನೆಯನ್ನು ಆದಿಚುಂಚನಗಿರಿ ಶಾಕಾ ಮಠದ ಶಂಭುನಾಥ ಮಹಾ ಸ್ವಾಮಿಗಳು ಗಿಡಕ್ಕೆ ನೀರನ್ನು ಎರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತಾನಾಡಿದವರು

ಮಳೆಗಾಲದಲ್ಲಿಯೂ ನಾನಾ ಕ್ರೀಡಾ ಚಟುವಟಿಕೆಗಳು ನಡೆಯುತ್ತವೆ ಅದರಲ್ಲೂ ಮಳೆಗಾಲದಲ್ಲಿ ಕೆಸರುಗದ್ದೆಯಲ್ಲಿ ನಡೆಯುವ ಕ್ರೀಡಾಕೂಟ ಮಹತ್ವ ಪಡೆದುಕೊಂಡಿದೆ ಹಾಸನ ಜಿಲ್ಲಾ ಪತ್ರಕರ್ತರ ಸಂಘದ ವಿಶೇಷತೆ ಎಂದರೆ ಬೇಸಿಗೆಯ ಸಮಯದಲ್ಲಿ ಕ್ರಿಕೆಟ್, ಫುಟ್‌ಬಾಲ್, ವಾಲಿಬಾಲ್ ಒಂದಲ್ಲೊಂದು ಕ್ರೀಡಾಕೂಟಗಳು ನಡೆಸುತ್ತಲೇ ಇರುತ್ತಿರ ಮಳೆಗಾಲ ಬಂತೆಂದರೆ, ಕೆಸರು ಗದ್ದೆ ಕ್ರೀಡಾಕೂಟಗಳು ಗಮನ ಸೆಳೆಯುತ್ತವೆ. ಈ ಕ್ರೀಡಾಕೂಟಗಳು ದೇಸಿ ಸೊಗಡನ್ನು ಅನಾವರಣಗೊಳಿಸುತ್ತವೆ ಎಂದರು.

# ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯೇ ಬೆಂಗಳೂರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ಇಡೀ ವಿಶ್ವದಲ್ಲಿಯೇ ನಮ್ಮ ರಾಜಧಾನಿ ಬೆಂಗಳೂರಿಗೆ ಹೆಸರು ಸಿಕ್ಕಿರುವುದು ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಫಲ ಎಂದು ಶಾಸಕ ಎ.ಮಂಜು ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕೆಂಪೇಗೌಡ ಜಯಂತಿ ಆಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,ಇವತ್ತು ಬೆಂಗಳೂರನ್ನು ಗ್ರೀನ್ ಸಿಟಿ,ಸಿಲಿಕಾನ್ ಸಿಟಿ ಎಂದು ಕರೆಯಲಾಗುತ್ತಿದೆ.ಇದು ಕರ್ನಾಟಕ ರಾಜ್ಯದ ಕೀರ್ತಿಯನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದಿರುವುದು ಕೆಂಪೇಗೌಡರ ಕೊಡುಗೆ ಕಾರಣವಾಗಿದೆ ಎಂದರು.

ದೇಶ,ರಾಜ್ಯದ ಅಭಿವೃದ್ಧಿಗೆ ಕೊಡುಗೆ ನೀಡಿರುವ ಮಹಾನೀಯರನ್ನು ನಿತ್ಯವೂ ಸ್ಮರಿಸುವ ಕೆಲಸ ಆಗಬೇಕಿದೆ.ನಮ್ಮ ಆದರ್ಶ ವ್ಯಕ್ತಿಗಳನ್ನು ಕೇವಲ ಪೂಜೆ,ವೇದಿಕೆ ಕಾರ್ಯಕ್ರಮಕ್ಕೆ ಸೀಮಿತಗೊಳಿಸದೇ ಅವರನ್ನು ಸರ್ವಜನಾಂಗದ ಆದರ್ಶ ವ್ಯಕ್ತಿಗಳನ್ನಾಗಿ ಕಂಡುಕೊಳ್ಳಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಶಂಭುನಾಥಸ್ವಾಮೀಜಿ ಅವರು,ಸರಕಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯನ್ನು ರೂಪಿಸಿ ನಮ್ಮ ನಾಡು ನುಡಿ,ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿರುವ ಮಹಾನೀಯರ ಜಯಂತಿ ಆಚರಣೆಯನ್ನು ಕೈಗೊಂಡಿರುವುದು ಸಮಾಜದಲ್ಲಿ ಸಾಮರಸ್ಯಮೂಡಿಸುವ ಸಲುವಾಗಿಯೇ. ಇದನ್ನು ಅರ್ಥಮಾಡಿಕೊಂಡು ಎಲ್ಲಾ ಮಹಾನೀಯರ ಜಯಂತಿ ಆಚರಣೆಗಳಲ್ಲಿ ಸರ್ವರು ಭಾಗವಹಿಸಿ ಗೌರವ ಸಲ್ಲಿಸುವ ಮೂಲಕ ನಿತ್ಯ ಬದುಕಿನಲ್ಲಿ ಮಹಾಪುರುಷರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದರು.

ಕೆಂಪೇಗೌಡರು ಸಾಂಸ್ಕೃತಿಕ ವೈಭವದಲ್ಲಿ ನಾಡುಕಟ್ಟುವ ಕೆಲಸವನ್ನು ಮಾಡಿದ್ದಾರೆ.ಅದರ ಪ್ರಯೋಜನವನ್ನು ಇಂದು ಲಕ್ಷಾಂತರ ಮಂದಿ ಪಡೆದುಕೊಳ್ಳುತ್ತಿದ್ದಾರೆ.ನಮ್ಮ ಆಡಳಿತ ವ್ಯವಸ್ಥೆಯ ಕೇಂದ್ರ ಸ್ಥಾನವಾಗಿರುವ ಬೆಂಗಳೂರಿಗೆ ದೊಡ್ಡಹೆಸರು ಬರಲು ಪ್ರಮುಖ ಕಾರಣ ಕೆಂಪೇಗೌಡರು.ಈ ಸಲುವಾಗಿಯೇ ಅವರನ್ನು ನಮ್ಮ ನಾಡಪ್ರಭು ಎಂದು ಕರೆಯಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಪ್ರದೀಪ್ ಕುಮಾರ್, ಸದಸ್ಯರಾದ ಕೃಷ್ಣಯ್ಯ, ರಶ್ಮೀ, ತಹಶೀಲ್ದಾರ್ ಸೌಮ್ಯ, ತಾಪಂ ಇಒ ಶ್ರೀನಿವಾಸ್, ಬಿಇಒ ನಾರಾಯಣ, ಸಿಡಿಪಿಒ ವೆಂಕಟೇಶ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ, ಗ್ರೇಡ್-2 ತಹಸೀಲ್ದಾರ್ ಸಿ.ಸ್ವಾಮಿ, ಅಕ್ಷರದಾಸೋಹ ಅಧಿಕಾರಿ ರಂಗಸ್ವಾಮಿ, ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜು, ಕಂದಾಯ ಇಲಾಖೆ ಲೋಕೇಶ್, ಭಾಸ್ಕರ್, ಉಜ್ವಲ್ ಕುಮಾರ್ ಇತರರು ಉಪಸ್ಥಿತರಿದ್ದರು.

# ಅರಕಲಗೂಡು ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸಗಳಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ತಾಲ್ಲೂಕಿನಲ್ಲಿ ಹೇಮಾವತಿ, ಕಾವೇರಿ ಎರಡು ಜೀವ ನದಿಗಳು ಹರಿಯುತ್ತಿರುವ ಕ್ಷೇತ್ರದಲ್ಲಿ ದೇಶವೇ ತಿರುಗಿ ನೋಡುವಂತಹ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ ಎಂದು ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಕೊಣನೂರು ವಿನುತ ಕನ್ವೆನ್ಷನ್ ಹಾಲ್‌ನಲ್ಲಿ ಗ್ಯಾರಂಟಿ ಅನುಷ್ಠಾನ ಯೋಜನೆ ಅಧ್ಯಕ್ಷ ಎಚ್.ಪಿ. ಶ್ರೀಧರ್ ಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಮತ್ತು ಕೃಷಿ, ವಿವಿಧ ಕ್ಷೇತ್ರದ ಸಾಧಕರ ಸನ್ಮಾನ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಪ್ರಕೃತ್ತಿದತ್ತವಾಗಿ ತಾಲೂಕು ಸಂಪದ್ಭರಿತವಾಗಿದೆ. ಆದರೆ ಅಭಿವೃದ್ಧಿ ಪಥದತ್ತ ಸಾಗುವ ಮೂಲಕ ಹಿಂದುಳಿದ ತಾಲೂಕಿನಿಂದ ಹೊರಬರಬೇಕಿದೆ ಎಂದರು.

ಕೆಸವತ್ತೂರು ವಿರಕ್ತ ಮಠದ ಶ್ರೀ ಬಸವರಾಜೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಯುವಕರ ಕಣ್ಮಣಿಯಾಗಿ ಕೆಲಸ ಮಾಡುತ್ತಿರುವ ಶ್ರೀಧರ್ ಗೌಡರ ಹೆಸರು ಹೇಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಬಡ ವಿದ್ಯಾರ್ಥಿಗಳಿಗೆ 16 ಲಕ್ಷ ರೂ ವಿದ್ಯಾರ್ಥಿ ವೇತನ ಕೊಡಿಸಿರುವೆ. ಕ್ಷೇತ್ರದಲ್ಲಿ ಎಲ್ಲ ರಾಜಕಾರಣಿಗಳಿಗಿಂತ ಮಿಗಿಲಾಗಿ ಜನರ ಕಷ್ಟಗಳಿಗೆ ಸ್ಪಂದಿಸುವ ಗುಣ ಹೊಂದಿರುವ ಇವರ ಶ್ರೇಷ್ಠ ವ್ಯಕ್ತಿತ್ವಕ್ಕೆ ತಕ್ಕ ಫಲ ಸಿಗುವಂತಾಗಲಿ ಎಂದರು.

ಕೊಣನೂರು ಮೊಮ್ಮಿನ್ ಮಸೀದಿ ಧರ್ಮಗುರು ಮೊಹಮದ್ ರಿಜ್ವಾನ್ ಆಶೀರ್ವಚನ ನೀಡಿ, ಜಾತಿ ಮತದ ಭಾವನೆ ಮನೆಯೊಳಗಿರಬೇಕು. ಮನೆಯಿಂದ ಹೊರಗೆ ದೇಶದ ಹಿತಕ್ಕಾಗಿ ನಾವೆಲ್ಲ ಭಾರತೀಯರು ಎಂಬ ಭಾವನೆಯಿಂದ ಒಟ್ಟಾಗಿ ಶ್ರಮಿಸಬೇಕು. ಈ ನಿಟ್ಟಿನಲ್ಲಿ ಶ್ರೀಧರ್ ಗೌಡರ ಸೇವೆ ಸಾಮರಸ್ಯದ ಪ್ರತೀಕವಾಗಿದೆ ಎಂದು ಬಣ್ಣಿಸಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಪಿ. ಶ್ರೀಧರ್ ಗೌಡ ಮಾತನಾಡಿ, ಕ್ಷೇತ್ರದಲ್ಲಿ ಅಧಿಕಾರ ಅನುಭವಿಸಿದ ಜನಪ್ರತಿನಿಧಿಗಳಿಂದ ಇಲ್ಲಿಗೆ ಇಂಜಿನಿಯರ್ ಇಲ್ಲವೇ ಮೆಡಿಕಲ್ ಕಾಲೇಜು ತರುವುದಕ್ಕಾಗದಿದ್ದರೂ ಕನಿಷ್ಠ ಒಂದು ಡಿಪ್ಲೊಮೊ ಕಾಲೇಜು ಕಾಲೇಜು ತರಲು ಸಾಧ್ಯವಾಗದಿರುದು ದುರಂತದ ಸಂಗತಿ ಎಂದು ಅಸಮಧಾನ ವ್ಯಕ್ತಪಡಿಸಿದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಟಿ. ಸೋಮಶೇಖರ್, ಹಳ್ಳಿಮೈಸೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಗೌಡ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಗೊರೂರು ರಂಜಿತ್, ತಾಲೂಕು ಮಜುಂದಾರ್ ಕಾಂಗ್ರೆಸ್ ಘಟಕದ ಅಧ್ಯಕ್ಷ ರಂಗನಾಥ್, ಹಾರಂಗಿ ಮಹಾ ಮಂಡಲ ಮಾಜಿ ಅಧ್ಯಕ್ಷ ಸರಗೂರು ದೊಡ್ಡೇಗೌಡ, ವಕೀಲರಾದ ಪ್ರಶಾಂತ್, ರಾಜೇಶ್, ಮುಖಂಡರಾದ ಲಕ್ಷ್ಮಣ್, ಲೋಕೇಶ್, ಜಾಕೀರ್ ಹುಸೇನ್, ಸಲೀಂ, ಸುಬಾನ ಷರೀಫ್, ಜುಬೇರ್, ದಶರಥ, ಮಲ್ಲೇಶ್, ಒಡನಹಳ್ಳಿ ಕುಮಾರ್ ಇತರರಿದ್ದರು. ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳು, ಪಾಲಕರು ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

## ಅರಸೀಕೆರೆಯಲ್ಲಿ ರೈತ ಸಂಘದಿಂದ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸೂರು ನಿರ್ಮಿಸಿಕೊಳ್ಳಲು ಬಯಸುವ ಫಲಾನುಭವಿಗಳಿಗೆ ಕಾನೂನಿನ ತೊಡಕು ಎದುರಾಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ರೈತ ಸಂಘದ ರಾಜ್ಯ ಸಂಚಾಲಕ ಕನಕಂಚೇನಹಳ್ಳಿ ಪ್ರಸನ್ನಕುಮಾರ್ ಒತ್ತಾಯಿಸಿದರು.

ತಾಲ್ಲೂಕು ಪಂಚಾಯಿತಿ ಸಾಮರ್ಥ್ಯಸೌಧ ಆವರಣದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ರೂಪುಗೊಳ್ಳುತ್ತಿರುವ ಕೆಲ ನಿಯಮಾವಳಿಗಳು ಬಡವರಿಗೆ ಮಾರಕವಾಗಿ ಪರಿಣಮಿಸಿವೆ. ಮನೆ ಕಟ್ಟಿಕೊಳ್ಳಲು ಬಯಸುವ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ, ಕುಡಿಯುವ ನೀರಿನ ಸವಲತ್ತು ಸೇರಿ ಮೂಲಸೌಕರ್ಯ ನೀಡದಿರುವ ಕುರಿತು ಚರ್ಚೆಗಳು ನಡೆದಿವೆ. ಇಂತಹ ಬೆಳವಣಿಗೆಗಳಿಂದ ಸ್ವಂತ ಸೂರು ಹೊಂದಬೇಕು ಎಂದು ಬಯಸಿದವರಿಗೆ ಆಘಾತ ಎದುರಾಗಲಿದೆ. ಸಂಬಂಧಿಸಿದ ಅಧಿಕಾರಿಗಳು ವಾಸ್ತವ ಮನವರಿಕೆ ಮಾಡಿಕೊಟ್ಟು ಅರ್ಹರಿಗೆ ತೊಂದರೆ ಎದುರಾಗದಂತೆ ನೋಡಿಕೊಳ್ಳಬೇಕು ಎಂದು ಆಗ್ರಹಿಸಿದರು.

## ಇತಿಹಾಸದಲ್ಲಿ ಈ ದಿನ

### ಜೂನ್-29

**1613:** ಇಂಗ್ಲೆಂಡ್‌ನ ರಾಜ ಜೇಮ್ಸ್, ಈಸ್ಟ್ ಇಂಡಿಯಾ ಕಂಪನಿಗೆ ಭಾರತದಲ್ಲಿ ವ್ಯಾಪಾರ ಮಾಡಲಿಕ್ಕೆ ಅಧಿಕೃತ ಅನುಮತಿ ನೀಡಿದರು.

**1850:** ಪ್ರಥಮ ತೇಜಸ್ ವಿಮಾನದ ಮಾದರಿ ರೂಪದಲ್ಲಿ ಹಾರಾಟ ನಡೆಸಲಾಯಿತು.

**1974:** ಭಾರತದ ಬೋಧನಾ ಕ್ಷೇತ್ರದಲ್ಲಿ ಅಂದಾಜು ಮೊದಲ ಸರ್ಕಾರಿ ಬೋರ್ಡ್ ಪರೀಕ್ಷೆಯ ಫಲಿತಾಂಶಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಲಾಯಿತು.

**2007:** ಐಫೋನ್ ಅನ್ನು ಆಪಲ್ ಕಂಪನಿ ಮೊದಲ ಬಾರಿಗೆ ಮಾರಾಟಕ್ಕೆ ಬಿಡುಗಡೆ ಮಾಡಿತು.

#### ಜನನ

**1798:** ಜಾಕ್ಸ್ ಜೋಸೆಫ್ ಮಾಥಿ, ಫ್ರಾನ್ಸ್ ಗಣಿತಜ್ಞ.

**1900:** ಆನ್ಸೆಲ್ ಆಡಮ್ಸ್, ಅಮೇರಿಕಾದ ಪ್ರಸಿದ್ಧ ಛಾಯಾಗ್ರಾಹಕ.

**1936:** ಹರ್ಮಿಯನ್ ಕಾರ್ಸ್, (Harman Kardon ಕಂಪನಿಯ ಸ್ಥಾಪಕ).

**1944:** ಕೇಂದ್ರ ಮಾಜಿ ಸಚಿವ ವೆಂಕಯ್ಯ ನಾಯ್ಡು.

#### ಮರಣ

**1967:** ಜಯಂತ್ ರಾಮಾಚಂದ್ರನ್ ಭಾರತೀಯ ಕ್ರಾಂತಿಕಾರಿ.

**1992:** ಪಿತ್ತೋಬಿ ಶಿವರಾಮಯ್ಯ ಭಾರತೀಯ ಸಾಹಿತಿ ಮತ್ತು ಸ್ವಾತಂತ್ರ್ಯ ಹೋರಾಟಗಾರ.

# ಆರೋಗ್ಯವಿದ್ದವನೇ ಅರಸ...



**-ಚೇತನ್ ಗುರೂಜಿ,**
**ಬಸವ ಯೋಗ ಕೇಂದ್ರ, ಅಡಗೂರು**

ಒಂದು ದೇಶದ ನಿಜವಾದ ಸಂಪತ್ತೆಂದರೆ ಏನು ಎಂಬ ಪ್ರಶ್ನೆಗೆ ಅನೇಕ ಜನರ ಉತ್ತರ ಅಲ್ಲಿನ ಖನಿಜ ಸಂಪತ್ತು, ಭೂಪ್ರದೇಶ, ಜನಸಂಖ್ಯೆ, ತಲಾದಾಯ, ನೈಸರ್ಗಿಕ ಸಂಪತ್ತು ಹೀಗೆ ಹೇಳುತ್ತಾರೆ. ಆದರೆ ಪ್ರಸ್ತುತ ದಿನಮಾನದಲ್ಲಿ ದೇಶದ ಸಂಪತ್ತು ಎಂದರೆ ಜನರ ಆರೋಗ್ಯ ಎಂದಾಗಿದೆ.

ಉದಾಹರಣೆಗೆ ನೋಡುವುದಾದರೆ ಜಪಾನ್ ಎನ್ನುವ ಪುಟ್ಟ ದೇಶ ನಮ್ಮ ಕರ್ನಾಟಕದ ಅರ್ಧ ಭೂ ಪ್ರದೇಶ ಇರುವಂತಹದ್ದು ಎರಡು ಮಹಾಯುದ್ಧಗಳನ್ನು ಎದುರಿಸಿದ ದೇಶ. ಮತ್ತೆ ಪುಟ್ಟಿದೆದ್ದಿದ್ದು ಮೇಲೆ ಬಂದದ್ದು ನೋಡಿದರೆ ನಾವೆಲ್ಲರೂ ನಿಬ್ಬೆರಗಾಗಬೇಕು. ಮೊದಲು ಪ್ರಾಧಾನ್ಯತೆ ಕೊಟ್ಟಿದ್ದು ಶಾಂತಿ ಸೌಹಾರ್ದತೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ. ದೇಶ ಅಭಿವೃದ್ಧಿಯಾಗಬೇಕಾದರೆ ಜನರು ದೈಹಿಕ ಮತ್ತು ಮಾನಸಿಕವಾಗಿ ಬಲಿಷ್ಠರಾಗಿರಬೇಕು ಎಂಬುದು ಅವರಿಗೆ ಅರ್ಥವಾಗಿತ್ತು. ಆದ್ದರಿಂದಲೇ ಜಗತ್ತಿಗೆ ಅನೇಕ ನಂಬರ್ ಒನ್ ಕಾರುಗಳು ಮತ್ತು ಟಿವಿ ಅಲ್ಲದೆ ಎಲೆಕ್ಟ್ರಿಕ್ ಉತ್ಪನ್ನಗಳನ್ನು ತಯಾರಿಸಲು ಸಾಧ್ಯವಾಗಿದ್ದು. ಜೊತೆಗೆ ವಿಶ್ವದ ಶ್ರೀಮಂತ ದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ದೇಹ ಮತ್ತು ಮನಸ್ಸು ಆರೋಗ್ಯವಿಲ್ಲದಿದ್ದರೆ ಇಷ್ಟೆಲ್ಲ ತಂತ್ರಜ್ಞಾನವನ್ನು ಕಂಡುಹಿಡಿಯಲು ಸಾಧ್ಯವಾಗುತ್ತಿತ್ತೆ. ಆ ದೇಶದಲ್ಲಿ ಒಂದು ನಿಯಮವಿದೆ ಸರ್ಕಾರಿ ಸವಲತ್ತುಗಳನ್ನು ಪಡೆಯುವವರು ಆರೋಗ್ಯ ಕೆಡಿಸಿಕೊಂಡರೆ ಅವರಿಗೆ ಎಲ್ಲಾ ಸೌಕರ್ಯಗಳನ್ನು ನಿಲ್ಲಿಸಲಾಗುತ್ತದೆ. ಆರೋಗ್ಯವಾಗಿದ್ದರಷ್ಟೇ ಎಲ್ಲಾ ಸೌಲಭ್ಯಗಳು ಪಡೆಯಬಹುದು. ಅಂದರೆ ಆರೋಗ್ಯ ಚೆನ್ನಾಗಿದ್ದರೆ ಎಲ್ಲವೂ ಸುಖಮಯವಾಗಿ ನಡೆಯುತ್ತದೆ ಎಂಬುದನ್ನು ಜಪಾನಿಗರು ಅರ್ಥೈಸಿಕೊಂಡಿದ್ದಾರೆ. ದೀರ್ಘಾಯುಷ್ಯಗಳಾಗಿ ಬದುಕುತ್ತಿರುವ ಜನರು ಇರುವುದುಂಟು.

ಭರತ ಖಂಡದಲ್ಲಿ ನೋಡುವುದಾದರೆ ಆರೋಗ್ಯ ಕೆಡಿಸಿಕೊಂಡರೆ ಸರ್ಕಾರಿ ಸೌಲಭ್ಯಗಳು ಸಿಗುತ್ತವೆ. ಅದಕ್ಕಾಗಿ ಜನರು ಅಂದುಕೊಂಡಿರುವುದು ಆರೋಗ್ಯದ ಜವಾಬ್ದಾರಿ ನಮ್ಮದಲ್ಲ ಸರ್ಕಾರದ್ದೆಂದು.

ರೋಗ ಬಂದ ವ್ಯಕ್ತಿಯ ಬಗ್ಗೆ ಅವರ ಕುಟುಂಬದವರು ತೋರಿಸುವ ಪ್ರೀತಿಯು ಸಹ ಒಂದು ವರದಾನವೇ. ರೋಗಿಯಾಗುವುದೆಂದರೆ ನಾಚಿಕೆ ಪಟ್ಟುಕೊಳ್ಳಬೇಕು. ನಾವು ಅದೊಂದು ಹೆಮ್ಮೆ ಎಂದುಕೊಳ್ಳಬಾರದು. ಏಕೆಂದರೆ ಮನೆಯಲ್ಲಿ ಒಬ್ಬನಿಗೆ ರೋಗ ಬಂತೆಂದರೆ ಅವನು ಮಾಡುವ ಕೆಲಸ ನಿಲ್ಲುತ್ತದೆ. ಅವರನ್ನು ನೋಡಿಕೊಳ್ಳಲು ಮತ್ತೊಬ್ಬರು ಬೇಕಾಗುತ್ತದೆ. ಇದರಿಂದ ಮನೆಯ ಮತ್ತು ದೇಶದ ಅಭಿವೃದ್ಧಿಯು ಕುಂಠಿತಗೊಳ್ಳುತ್ತದೆ. ಕಾರಣ ರೋಗ ಬಂದ ವ್ಯಕ್ತಿಯ ದುಡಿಮೆ ನಿಲ್ಲುತ್ತದೆ. ಆ ವ್ಯಕ್ತಿಯನ್ನು ನೋಡಿಕೊಳ್ಳುವ ಇನ್ನೊಬ್ಬರ ಕೆಲಸವು ನಿಂತು ಅವರ ಸೇವೆಯನ್ನು ಮಾಡುವುದೇ ಆಗುತ್ತದೆ. ಅದರಿಂದ ಮನೆಯ ಆರ್ಥಿಕ ಪರಿಸ್ಥಿತಿಯು ಕುಂಠಿತವಾಗುತ್ತದೆ. ಆದ್ದರಿಂದಲೇ ಬಹಳ ಹಿಂದೆಯೇ ಆರೋಗ್ಯವಿಲ್ಲದ ಬಾಳು ಎಷ್ಟಿದ್ದರೂ ಹಾಳು ಎಂದು ಹೇಳಿದ್ದು ಇನ್ನೊಂದು ಗಾದೆ ಮಾತು ಒಂದು ಮನೆಯ ಭಾಗ್ಯವೆಂದರೆ ಅವರು ಸಂಪಾದಿಸಿದ ಕಾರು, ಹಣ, ಆಸ್ತಿ, ಬಡವೆ ಇವುಗಳಲ್ಲ. ಆರೋಗ್ಯವೇ ಭಾಗ್ಯ ಎಂಬ ತಿಳವಳಿಕೆಯನ್ನು ನಮ್ಮ ಹಿರಿಯರು ಅರಿತಿದ್ದರು. ನಾವು ಎಲ್ಲವನ್ನೂ ಮರೆತು ಕ್ಷಣಿಕದ ಆಸೆಗೆ ಬಲಿಯಾಗುತ್ತ ಆರೋಗ್ಯ ಕೆಡಿಸಿಕೊಳ್ಳುತ್ತಿದ್ದೇವೆ. ಸ್ವತಂತ್ರ ಪೂರ್ವದಲ್ಲಿ ಆಗಿ ಹೋದ ಕರ್ನಾಟಕದ ಗಾಂಧಿ ಎಂದು ಕರೆಸಿಕೊಂಡ ಹರ್ಡೆಕರ್ ಮಂಜಪ್ಪನವರು ಹೇಳುತ್ತಿದ್ದರು. ಏನೆಂದರೆ, ಜೈಲಿನಲ್ಲಿರುವ ಕೈದಿಗಿಂತಲೂ ಆಸ್ಪತ್ರೆಯಲ್ಲಿರುವ ರೋಗಿ ಏನೋ ದೊಡ್ಡ ತಪ್ಪು ಮಾಡಿದ್ದಾನೆ ಎಂದು. ಅಂದರೆ ಜೈಲಿನಲ್ಲಿರುವ ಕಳ್ಳನಿಗೆ ಇನ್ನೊಬ್ಬರು ಶಿಕ್ಷೆ ಕೊಡುತ್ತಾರೆ. ಅದೇ ಆಸ್ಪತ್ರೆಯಲ್ಲಿರುವ ರೋಗಿಗೆ ತನಗೆ ತಾನೆ ಶಿಕ್ಷಿಸಿಕೊಳ್ಳುತ್ತಾನೆ. ಹಾಗಾದರೆ ದೇವರ ದೃಷ್ಟಿಯಲ್ಲಿ ರೋಗಿಯೇ ಏನೋ ದೊಡ್ಡ ತಪ್ಪು ಮಾಡಿದ್ದಾನೆಂದು ಅರ್ಥ ಮಾಡಿಕೊಳ್ಳಬೇಕೆಂದು ತಿಳಿಸಿದ್ದಾರೆ. 80 ವರ್ಷಗಳ ಹಿಂದೆ ಈ ಮಾತನ್ನು ಹೇಳಿದ್ದಾರೆಂದರೆ ಈಗ ನಾವುಗಳು ಯಾವ ಕಡೆ ಸಾಗುತ್ತಿದ್ದೇವೆ ಎಂಬುದು ಒಮ್ಮೆ ಯೋಚಿಸುವ ಸುಸಂದರ್ಭ. ಒಂದು ಕಾಲದಲ್ಲಿ ಶ್ರೀಮಂತಿಕೆ ಇದ್ದರೆ ಬಹಳ ಗೌರವ ಸಿಗುತ್ತಿತ್ತು. ಕಾಲ ಬದಲಾದಂತೆ ಆರೋಗ್ಯವಿದ್ದವರಿಗೆ ಮಾತ್ರವೇ ಬೆಲೆ ಸಿಗುವಂತಹ ಸ್ಥಿತಿಗೆ ಬಂದಿದ್ದೇವೆ.




ಆರೋಗ್ಯದಿಂದಿರುವ ವ್ಯಕ್ತಿ ಅರಸನ ಆಸ್ಥಾನದ ವೈಭವವನ್ನು ನಾಚಿಸುತ್ತಾನೆ. ಆರೋಗ್ಯವಿರುವ ವ್ಯಕ್ತಿಯ ಮುಂದೆ ಅರಸನ ಯಾವುದೇ ವೈಭೋಗ ಸರಿಸಾಟಿಯಾಗಲಾರದು. ಹಿಂದಿನ ರಾಜರ ಮಹಾರಾಜರು ದೇಹದ ಸದೃಢತೆಗೆ ಬಹಳ ಗಮನಹರಿಸಿದ್ದರಿಂದಲೇ ಒಬ್ಬರು ಮೂರ್ನಾಲ್ಕು ದಶಕಗಳ ಕಾಲ ರಾಜ್ಯವನ್ನ ಆಳಲು ಸಾಧ್ಯವಾಗಿದ್ದು ಅಂತಹ ಯುಕ್ತಿ ಮತ್ತು ಶಕ್ತಿ ಇದ್ದಿದ್ದರಿಂದಲೇ ಕೆಂಪೇಗೌಡರು ಬೆಂಗಳೂರನ್ನು ನಿರ್ಮಿಸಲು ಮದಕರಿ ನಾಯಕರು ಚಿತ್ರದುರ್ಗದ ಕೋಟೆ ಕಟ್ಟಲು ಕೃಷ್ಣದೇವರಾಯರು ಹಂಪಿಯನ್ನು ಶ್ರೀಮಂತ ಗೊಳಿಸಲು ಸಾಧ್ಯವಾಗಿದ್ದು. ಮಹಿಳೆಯರು ಯಾವುದಕ್ಕೂ ಏನು ಕಮ್ಮಿ ಇಲ್ಲವೆಂಬಂತೆ ಕಿತ್ತೂರು ರಾಣಿ ಚನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಇವರೆಲ್ಲರೂ ಬ್ರಿಟಿಷರ ವಿರುದ್ಧ ಹೋರಾಡಲು ಅವರ ದೈಹಿಕ ಶಕ್ತಿಯೇ ಕಾರಣ. ಅಲ್ಲದೆ ಗೌರಿಶಂಕರ ಶಿಖರ ಏರಿದ ಮೊಟ್ಟ ಮೊದಲ ಭಾರತೀಯ ತೇನ್ಸಿಂಗ್ ಅವರ ದೈಹಿಕ ಶಕ್ತಿಯೇ ವಿಶ್ವದ ಎತ್ತರದ ಶಿಖರವನ್ನು ಏರಲು ಸಾಧ್ಯವಾಗಿದ್ದು ಆರೋಗ್ಯವಿಲ್ಲದೆ ಯಾವುದೇ ಯಶಸ್ಸನ್ನು ಕಾಣಲು ಆಗುವುದಿಲ್ಲ. ಸಚಿನ್ ತೆಂಡೂಲ್ಕರ್ ಎರಡೂವರೆ ದಶಕ ಕ್ರಿಕೆಟ್ ಆಡಲು ಅನುಕೂಲವಾಗಿದ್ದು ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯವಾಗಿದ್ದರಿಂದ ಎಂಬುದು ನೆನಪಿಡಬೇಕಾದುದು.

ಮಹೇಂದ್ರ ಸಿಂಗ್ ಧೋನಿ, ವಿರಾಟ್ ಕೊಹ್ಲಿ ಇವರ ಯಶಸ್ಸಿಗೂ ಅವರುಗಳ ದೈಹಿಕ ಫಿಟ್ನೆಸ್ ಕಾರಣ. ನಮ್ಮ ಯುವಜನತೆ ಈ ಲೇಖನ ಓದಿದ ಮೇಲಾದರೂ ನಮ್ಮ ಎಲ್ಲಾ ಸಾಧನೆಯ ಹಿಂದೆ ಆರೋಗ್ಯವಿದ್ದರೆ ಮಾತ್ರ ಎಂಬ ಸತ್ಯವನ್ನು ತಿಳಿದುಕೊಂಡು ಆ ಕಡೆ ಮುಖ ಮಾಡಿದರೆ ಮಾತ್ರ ಸಾಧ್ಯವಿದೆ ಎಂಬ ಅರಿವು ಬೇಗ ಬರಲಿ. ಇಲ್ಲದೆ ಹೋದರೆ ಇತ್ತೀಚಿಗೆ ಯುವಕರಲ್ಲಿ ಆಗುತ್ತಿರುವ ಹೃದಯಘಾತ ಘಟನೆಗಳು ಇನ್ನು ಹೆಚ್ಚಾಗುತ್ತಾ ಹೋಗುವುದರಲ್ಲಿ ಸಂಶಯವಿಲ್ಲ.

ಶರಣೆ ಅಕ್ಕಮಹಾದೇವಿಯವರು ಒಂದು ವಚನದಲ್ಲಿ
ತೆರೆಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ
ತನ್ನ ನೂಲು ತನ್ನ ಸುತ್ತಿ ಸಾವಂತೆ
ಮನ ಬಂದುದ ಬಯಸಿ ಬೇವುತ್ತಿದ್ದೇನೆಯ್ಯಾ
ಎನ್ನ ಮನದ ದುರಾಸೆಯ ಮಾಣಿಸಿ
ನಿಮ್ಮತ್ತ ತೋರ ಚೆನ್ನಮಲ್ಲಿಕಾರ್ಜುನ.

ಮೇಲೆ ಹೇಳಿರುವಂತೆ ನಾವೇ ಮಾಡಿಕೊಂಡ ಅನೇಕ ಬಂಧನಗಳಿಂದ ಹೊರಬರಲಾಗದೆ ಮನಸ್ಸಿನ ಆಸೆಗಳನ್ನು ಈಡೇರಿಸಿಕೊಳ್ಳಲಾಗದೆ ಒದ್ದಾಡುತ್ತಾ ಇದರಲ್ಲೇ ಜೀವನ ಮುಗಿಸುತ್ತೇವೆ ಹೊರತು ನಾವು ಭೂಮಿಗೆ ದೇವರು ಕಳಿಸಿರುವುದು ಆರೋಗ್ಯದಿಂದ ಆನಂದದಿಂದ ಹಣ್ಣು ಹಂಪಲುಗಳನ್ನು ತಿಂದುಕೊಂಡು ಈ ಭೂಲೋಕವನ್ನ ನಮ್ಮ ಕೈಲಾದಷ್ಟು ಸ್ವರ್ಗ ಮಾಡುವುದಕ್ಕೋಸ್ಕರ ಅದು ಬಿಟ್ಟು ಕೇವಲ ಗಳಿಸುವುದು ಕಟ್ಟುವುದು ಇಷ್ಟನ್ನು ಮಾಡುವುದರಲ್ಲಿ ಆರೋಗ್ಯ ಕೆಡಿಸಿಕೊಂಡು ಅಲ್ಪ ಅವಧಿಯಲ್ಲಿ ಜೀವನ ಮುಗಿಸುವುದು ಎಷ್ಟು ಸರಿ ಒಮ್ಮೆ ಯೋಚಿಸಬೇಕಲ್ಲವೇ.

ಇನ್ನು ಮುಂದುವರೆದು ಬಹಳಷ್ಟು ಜನರ ಮನಸ್ಥಿತಿ ಹೇಗಿದೆ ಎಂದರೆ




ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ರೋಗ ಬಂದಾಗ ಆರೋಗ್ಯದೆಡೆಗೆ ಗಮನಹರಿಸುವುದಕ್ಕಿಂತ ಮುಂಚಿತವೇ ಎಚ್ಚರವಿದ್ದರೆ ಒಳ್ಳೆಯದಲ್ಲವೇ ಬಸವಣ್ಣನವರ ಒಂದು ವಚನ ನಮ್ಮನ್ನು ಬಹಳ ಎಚ್ಚರಿಸುತ್ತದೆ ಅದೇಂದರೆ
ಕಣ್ಣುಗಳು ತುಂಬಿದ ಬಳಿಕ ನೋಡಲಿಲ್ಲ
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ
ಮನ ತುಂಬಿದ ಬಳಿಕ ನೆನೆಯಲಿಲ್ಲ
ಮಹಾಂತ ಕೂಡಲಸಂಗಮದೇವನ

ದೇಹದ ಎಲ್ಲಾ ಅಂಗಾಂಗಗಳು ಚೆನ್ನಾಗಿದ್ದಾಗಲೇ ಅವುಗಳನ್ನು ಒಳ್ಳೆಯ ರೀತಿ ಬಳಸಿಕೊಂಡು ಏನಾದರೂ ಸಾಧಿಸುವ ಹಂಬಲ ಇರಬೇಕು ಅದಲ್ಲದೆ ಕೈ ನಡುಗುವಾಗ ಕಣ್ಣು ಕಾಣಿಸದೆ ಇದ್ದಾಗ ಕಿವಿಗಳು ಕೇಳದೆ ಇದ್ದಾಗ ಮನಸ್ಸಿನ ತುಂಬಾ ಬೇಡದ ಯೋಚನೆಗಳು ತುಂಬಿಕೊಂಡಿದ್ದರೆ ಮಾಡಲಾದಿತೆ. ಎಂಬ ಅರಿವು ಬಂತೆಂದರೆ ಸಾಕು ಯಾವುದನ್ನು ಮಾಡಬೇಕಾದರೂ ವೈಯಕ್ತಿಕವಾಗಿ ಆರೋಗ್ಯವಿದ್ದರೆ ಮಾತ್ರವೇ ಸಾಧ್ಯ. ಆ ಮೂಲಕ ಯಾವುದೇ ಕ್ಷೇತ್ರದಲ್ಲಾದರೂ ಸಾಧನೆಯನ್ನು ಮಾಡಲು ಆಗುವುದು ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಒಲಿಂಪಿಕ್ ನಲ್ಲಿ ಚಿನ್ನದ ಪದಕ ಗೆಲ್ಲಲು ಆಗುವುದಕ್ಕೂ ದೇಹವೇ ಸಾಧನ ಆ ದೇಹಕ್ಕೆ ಆರೋಗ್ಯವೇ ಭೂಷಣ ಆಗಲೇ ಪದಕ ಗೆಲ್ಲುವ ಚೈತನ್ಯ ಬರುತ್ತದೆ.

ಉಸೇನ್ ಬೋಲ್ಟ್ ಹೆಸರು ಕೇಳಿರಬಹುದು ಒಲಂಪಿಕ್ಸ್ ರಿಲೆಯಲ್ಲಿ ಕಡಿಮೆ ಸೆಕೆಂಡಿಗೆ ಗುರಿ ಮುಟ್ಟಿದ ವಿಶ್ವದ ನಂಬರ್ ಒನ್ ಆಟಗಾರ ಅವರನ್ನು ಪತ್ರಕರ್ತರು ನಿಮ್ಮ ಈ ಯಶಸ್ಸಿಗೆ ಕಾರಣ ಏನೆಂದು ಪ್ರಶ್ನಿಸಿದಾಗ ಹೇಳಿದ ಉತ್ತರ ದೇಹದ ಆರೋಗ್ಯವನ್ನು ನಾವು ನೋಡಿಕೊಂಡರೆ ದೇಹ ವಾಪಸ್ ನಾವು ಅಂದುಕೊಂಡಿದ್ದನ್ನು ಸಾಧಿಸಲು ಸಹಾಯಮಾಡುತ್ತದೆ. ಅಂದರೆ ಆರೋಗ್ಯವಂತ ಶರೀರ ಅರಮನೆ ಇದ್ದಹಾಗೆ ಅನಾರೋಗ್ಯವಂತ ಸೇರಿದ ಸೆರೆಮನೆ ಇದ್ದಂತೆ. ಏನಂತೀರಿ?

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248